# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಟಿ.ದಾಸರಹಳ್ಳಿ ಉಪ ವಿಭಾಗ, ದಾಸರಹಳ್ಳಿ ವಲಯ
ಮಾರಮ್ಮ ದೇವಸ್ಥಾನದ ಹತ್ತಿರ, ಬಾಗಲಗುಂಟೆ

ಸಂಖ್ಯೆ:ಬೃ.ಬೆಂ.ಮ.ಪಾ/ದಾ.ವ/ಸ.ಅ/ವಾ.14/ಪಿಆರ್:38:2021-22 ದಿನಾಂಕ:07.05.2022

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)/ಪಿಆರ್/35/2020-21, ದಿ.16.04.2021ರ ಆದೇಶದಂತೆ ದಿ.07.05.2022 ರಂದು ನಡೆದ ಬಾಗಲಗುಂಟೆ ವಾರ್ಡ್ ನಂ.14ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-**

**ಸಭೆಗೆ ಹಾಜರಾಗಿದ್ದವರ ವಿವರಗಳು:-**

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ.ಕೆ.ಮರುಳಸಿದ್ದಪ್ಪ | ಕಾರ್ಯಪಾಲಕ ಅಭಿಯಂತರರು, ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು |
| 2 | ಶ್ರೀ.ವೆಂಕಟೇಶಪ್ಪ | ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್ ನಂ.14, ಬಾಗಲಗುಂಟೆ |
| 3 | ಶ್ರೀ.ಮಂಜುನಾಥ್ ಡಿ | ವಾಟರ್ ಇನ್ಸ್‌ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ ಬಾಗಲಗುಂಟೆ |
| 4 | ಶ್ರೀ.ಕೃಷ್ಣಮೂರ್ತಿ | ಡಿಫೆನ್ಸ್ ಕಾಲೋನಿ, ನಾಗರೀಕ ಕ್ಷೇಮಾಭಿವೃದ್ಧಿ ಸಂಘ |
| 5 | ಶ್ರೀ.ಮೋಹನ್ ಗೌರೋಜಿ | ಹಿರಿಯ ಆರೋಗ್ಯ ಪರಿವೀಕ್ಷಕರು |
| 6 | ಶ್ರೀ.ಆದರ್ಶ್ ಡಿ.ಕೆ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಎನ್-4 ಸಬ್ ಡಿವಿಜನ್ |
| 7 | ಶ್ರೀಮತಿ.ಜ್ಯೋತಿ | ಕಿರಿಯ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ, 110 ಹಳ್ಳಿ |
| 8 | ಶ್ರೀ.ಸಂಜೀವಪ್ಪ | ಅರಣ್ಯ ಇಲಾಖೆ, ಬಿಬಿಎಂಪಿ |
| 9 | ಶ್ರೀ.ಶಿವಲಿಂಗೇಗೌಡ | ತೋಟಗಾರಿಕೆ ಇಲಾಖೆ, ಬಿಬಿಎಂಪಿ |
| 10 | ಶ್ರೀ.ರವಿಕುಮಾರ್ | ವಾಟರ್ ಇನ್ಸ್‌ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ ಬಾಗಲಗುಂಟೆ |
| 11 | ಶ್ರೀ.ವಿ.ರಾಮೇಗೌಡ | ವಾರ್ಡ್ ಸಮಿತಿ ಸದಸ್ಯರು, ಭುವನೇಶ್ವರಿನಗರ |
| 12 | ಶ್ರೀ.ಇ.ಹನುಮಂತರಾಯಪ್ಪ | ವಾರ್ಡ್ ಸಮಿತಿ ಸದಸ್ಯರು, ಹಾವನೂರು ಬಡಾವಣೆ |

ನೋಡಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಭೆಯ ಸದಸ್ಯರು, ಹಾಜರಿದ್ದ ಅಧಿಕಾರಿಗಳನ್ನು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಈ ಹಿಂದಿನ ಸಭೆಯ ಸಭಾ ನಡವಳಿಯನ್ನು ಚರ್ಚಿಸಿ, ಬಾಕಿ ಇರುವ ಕುಂದು ಕೊರತೆಗಳನ್ನು ಆದ್ಯತೆಯ ಮೇಲೆ ಪೂರೈಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

## ಬಿ.ಡಬ್ಲ್ಯೂ.ಎಸ್.ಎಸ್.ಬಿ ಗೆ ಸಂಬಂಧಪಟ್ಟ ವಿಷಯದ ಬಗ್ಗೆ.

ಬಾಗಲಗುಂಟೆ ವಾರ್ಡ್ ವ್ಯಾಪ್ತಿಯಲ್ಲಿನ ಡಿಫೆನ್ಸ್ ಬಡಾವಣೆಯಲ್ಲಿ ನೀರು ಸರಬರಾಜು ಕ್ಷೀಣಯವಾಗಿರುವುದರಿಂದ ನೀರಿನ ಅಭಾವ ಉಂಟಾಗಿರುತ್ತದೆ. ಆದುದರಿಂದ ಹೆಚ್ಚಿನ ನೀರು ಸರಬರಾಜು ವ್ಯವಸ್ಥೆಯನ್ನು ಮಾಡಲು ಸಹಾಯಕ ಅಭಿಯಂತರರನ್ನು ವಾರ್ಡ್ ಕಮಿಟಿ ಸದಸ್ಯರು ಕೋರಿದರು.

ಒಳಚರಂಡಿ ವ್ಯವಸ್ಥೆಗಾಗಿ ಪೈಪ್‌ಲೈನ್ ಅಳವಡಿಸಲು ರಸ್ತೆಯನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಕತ್ತರಿಸಿರುವುದು ಕಂಡುಬಂದಿರುತ್ತದೆ. ಸದರಿ ರಸ್ತೆಯ ದುರಸ್ಥಿ ಕಾರ್ಯವನ್ನು ತುರ್ತಾಗಿ ನಿರ್ವಹಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಸಹಾಯಕ ಅಭಿಯಂತರರಾದ ಆದರ್ಶ್ ಕೆ ಮತ್ತು ಡಿ.ಮಂಜುನಾಥ್ ವಾಟರ್ ಇನ್ಸ್‌ಪೆಕ್ಟರ್ ರವರಿಗೆ ಸೂಚಿಸಲಾಯಿತು.

ಕ್ರಮ: ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ

## ಬೆಸ್ಕಾಂಗೆ ಸಂಬಂಧಪಟ್ಟ ವಿಷಯದ ಬಗ್ಗೆ.

- ಬೆಸ್ಕಾಂ ಇಲಾಖೆಯಿಂದ ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ಅಗೆದಿರುವ ಗುಂಡಿಗಳನ್ನು ತುರ್ತಾಗಿ ದುರಸ್ಥಿಪಡಿಸಲು ಬೆಸ್ಕಾಂ ಸಹಾಯಕ ಅಭಿಯಂತರರನ್ನು ಕೋರಿದರು.

ಸದರಿ ವಿಷಯಗಳ ಬಗ್ಗೆ ತುರ್ತು ಕ್ರಮವಹಿಸಲು ಸಂಬಂಧಪಟ್ಟ ಬೆಸ್ಕಾಂ ಇಲಾಖೆಯವರಿಗೆ ಸೂಚಿಸಲಾಯಿತು.

ಕ್ರಮ:ಬೆಸ್ಕಾಂ ಇಲಾಖೆ, ವಾ–14/ಸದಸ್ಯ ಕಾರ್ಯದರ್ಶಿ

- **ಘನತ್ಯಾಜ್ಯ ನಿರ್ವಹಣೆ ಬಗ್ಗೆ.**

ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಪರಿಣಾಮಕಾರಿಯಾಗಿ ಘನತ್ಯಾಜ್ಯ ವಿಲೇವಾರಿ ಮಾಡಲು ಕ್ರಮವಹಿಸುತ್ತಿರುವುದಾಗಿ ಸಭೆಗೆ ತಿಳಿಸಿದರು ಹಾಗೂ ಸಂಬಂಧಿಸಿದ ಗುತ್ತಿಗೆದಾರರು ಹಾಗೂ ಮೇಲ್ವಿಚಾರಕರುಗಳು ಹಾಜರಿದ್ದು, ಘನತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ಸೂಚಿಸಲಾಯಿತು.

ಕ್ರಮ:ಸ.ಕಾ.ನಿ.ಅ (ಘ.ತ್ಯಾ.ನಿ)/ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರು

- **ಕೋವಿಡ್–19 ಸಾಂಕ್ರಾಮಿಕ ರೋಗದ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್–19 ಸಂಬಂಧಿಸಿದಂತೆ, ಆರೋಗ್ಯ ಪರಿವೀಕ್ಷಕರು ಈ ಕೆಳಕಂಡಂತೆ ಮಾಹಿತಿ ಒದಗಿಸಿದರು.

| | |
|---|---|
| ಒಟ್ಟು ಪ್ರಕರಣಗಳು | 9099 |
| ಬಿಡುಗಡೆಯಾದ ಪ್ರಕರಣಗಳು | 8938 |
| ಸಕ್ರಿಯ ಪ್ರಕರಣಗಳು | 0 |
| ಮರಣ | 161 |

ಇರುತ್ತದೆಂದು ಹಾಗೂ ಸಧ್ಯದ ಪರಿಸ್ಥಿತಿಯಲ್ಲಿ 12 ರಿಂದ 14 ವರ್ಷದ ವಯಸ್ಸಿನ ಲಸಿಕೆ ಹಾಕುವ ಕಾರ್ಯಕ್ರಮ ನಡೆಯುತ್ತಿದ್ದು, ಮಕ್ಕಳಿಗೆ ರಜೆ ಇರುವುದರಿಂದ ಲಸಿಕೆಯನ್ನು ನೀಡಲು ತೊಂದರೆಯಾಗುತ್ತಿದೆ ಎಂದು ತಿಳಿಸಿದ್ದು, ಆದಾಗ್ಯೂ ಪಾಲಕರು ಮಕ್ಕಳನ್ನು ಆಸ್ಪತ್ರೆಯ ಹತ್ತಿರ ಕರೆತಂದು ಲಸಿಕೆ ಹಾಕಿಸಲು ವಾರ್ಡ್‌ನ ನಿವಾಸಿಗಳಿಗೆ ತಿಳಿಸಲು, ವಾರ್ಡ್ ಸಮಿತಿ ಸದಸ್ಯರಿಗೆ ಕೋರಲಾಯಿತು. 4ನೇ ಅಲೆಯ ಮುನ್ಸೂಚನೆ ಇರುವುದರಿಂದ ಸಾರ್ವಜನಿಕ ಪ್ರದೇಶದಲ್ಲಿ ಓಡಾಡುವ ಸಾರ್ವಜನಿಕರುಗಳು ಕಡ್ಡಾಯವಾಗಿ ಮಾಸ್ಕ್ ಮತ್ತು ಸಾರ್ವಜನಿಕ ಅಂತರವನ್ನು ಕಾಯ್ದುಕೊಳ್ಳಲು ಸೂಚಿಸಲು ಸಭೆಯಲ್ಲಿ ತಿಳಿಸಲಾಯಿತು.

ಶ್ರೀ.ಮೋಹನ್ ಗೌರೋಜಿ, ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಕೋವಿಡ್‌ನಿಂದ ಮೃತರಾದ ಒಟ್ಟು 161 ಜನರಿಗೆ ಸರ್ಕಾರದ ಸಹಾಯಧನವನ್ನು ವಾರ್ಡ್.14ರ ವ್ಯಾಪ್ತಿಯಲ್ಲಿನ ಫಲಾನುಭವಿಗಳಿಗೆ ಕೊಡಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಕ್ರಮ: ಕೋವಿಡ್ ಆರೋಗ್ಯ ವೈಧ್ಯಾಧಿಕಾರಿಗಳು/ ಹಿರಿಯ ಆರೋಗ್ಯ ಪರಿವೀಕ್ಷಕರು

- **ಇತರೆ ವಿಷಯಗಳ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿನ ಹಲವಾರು ಬಡಾವಣೆಗಳ ರಸ್ತೆಗಳಲ್ಲಿ ಡಾಂಬರೀಕರಣ ಕಾಮಗಾರಿಯು ಪ್ರಗತಿಯಲ್ಲಿರುವುದಾಗಿ ವಾರ್ಡ್ ಅಭಿಯಂತರರು ತಿಳಿಸಿದರು.

ಸಿಡೇದಹಳ್ಳಿ 110 ಹಳ್ಳಿಗಳ ವ್ಯಾಪ್ತಿಯಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ನಿರ್ವಹಿಸುತ್ತಿದ್ದು, ರಸ್ತೆ ನಿರ್ಮಾಣಕ್ಕೆ ತೊಂದರೆಯಾಗುವ ಗಿಡಗಳ ಕೊಂಬೆಗಳನ್ನು ತುರ್ತಾಗಿ ತೆಗೆಯಲು ವಲಯ ಅರಣ್ಯಾಧಿಕಾರಿಗಳಿಗೆ ಸೂಚಿಸಲಾಯಿತು.

ಶ್ರೀ.ಕೃಷ್ಣಮೂರ್ತಿ, ವಾರ್ಡ್ ಸಮಿತಿ ಸದಸ್ಯರು ರವರು ಹಾವನೂರು ಬಡಾವಣೆಯಲ್ಲಿ ಅನಧಿಕೃತವಾಗಿ ಸ್ಪಾ ಗಳನ್ನು ರಾಜೇಶ್ವರಿ ಆರೋಗ್ಯಧಾಮ ಎಂಬ ಹೆಸರಲ್ಲಿ ನಡೆಸುತ್ತಿದ್ದು, ಇದರಿಂದ ಹಾವನೂರು ಬಡಾವಣೆಯ ನಿವಾಸಿಗಳಿಗೆ ತುಂಬಾ ತೊಂದರೆ ಆಗುತ್ತಿರುವುದಾಗಿ ತಿಳಿಸಿ, ತುರ್ತಾಗಿ ಸದರಿ ಅಂಗಡಿಗಳನ್ನು ಮುಚ್ಚಿಸಲು ಸೂಚಿಸಿದರು.

ಹೆಸರಘಟ್ಟ ಮುಖ್ಯರಸ್ತೆಯಲ್ಲಿ ಎಲ್ಲಾ ಕಡೆ ದೊಡ್ಡ ಗುಂಡಿಗಳು ಬಿದ್ದಿದ್ದು, ತುರ್ತಾಗಿ ಮುಚ್ಚಲು Road Infrastructute Engineer ರವರಿಗೆ ತುರ್ತಾಗಿ ಸೂಚಿಸಲು ತಿಳಿಸಲಾಯಿತು.

ಬಾಗಲಗುಂಟೆ ವಾರ್ಡ್ ವ್ಯಾಪ್ತಿಯಲ್ಲಿ ಇರುವ ವಿಡಿಯಾ ಪ್ಯಾಕ್ಟರಿ ರಸ್ತೆಯ SWD Drain ನ್ನು ಒತ್ತುವರಿ ಮಾಡಿದ್ದು, ತುರ್ತಾಗಿ ವಶಪಡಿಸಿಕೊಳ್ಳಲು ರಾಜಕಾಲುವೆ ವಿಭಾಗದ ಇಂಜಿನಿಯರ್‌ಗಳಿಗೆ ಸೂಚಿಸಲಾಯಿತು.

ಸಿಡೇದಹಳ್ಳಿ ವ್ಯಾಪ್ತಿಯ 110 ಹಳ್ಳಿಗಳ ಪ್ರದೇಶದಲ್ಲಿ ಬರುವ ಎನ್.ಎಂ.ಹೆಚ್ ಬಡಾವಣೆಯಲ್ಲಿ ಹೊಸದಾಗಿ ಪಾರ್ಕ್ ನಿರ್ಮಿಸಲು ವಾರ್ಡ್ ಸಮಿತಿ ಸಭೆಯಲ್ಲಿ ಕೋರಲಾಯಿತು.

**ಕ್ರಮ:**ಸ.ಅ ವಾ.14/ ಸ.ಕಾ.ನಿ.ಅ (ದಾಸರಹಳ್ಳಿ ಉಪ-ವಿಭಾಗ)
ಸಹಾಯಕ ಕಾರ್ಯಪಾಲಕ ಅಭಿಯಂತರರು, ತೋಟಗಾರಿಕೆ

**ಸಹಾಯಕ ಅಭಿಯಂತರರು**
**ಹಾಗೂ ಸದಸ್ಯ ಕಾರ್ಯದರ್ಶಿ ವಾರ್ಡ್ ಸಮಿತಿ**

07/05/2022
**ನೋಡಲ್ ಅಧಿಕಾರಿ ಹಾಗೂ**
**ವಾರ್ಡ್ ಸಮಿತಿ ಅಧ್ಯಕ್ಷರು, ವಾ.ನಂ.14, ಬಾಗಲಗುಂಟೆ**
**ಮತ್ತು ಕಾರ್ಯಪಾಲಕ ಅಭಿಯಂತರರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಧಿಕಾರಿಗಳ ಮಾಹಿತಿಗಾಗಿ:-**

1) ಸನ್ಮಾನ್ಯ ಶ್ರೀ.ಆರ್.ಮಂಜುನಾಥ್ ರವರು, ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿ.ಬಿ.ಎಂ.ಪಿ, ಬೆಂಗಳೂರು ರವರ ಅವಗಾಹನೆಗಾಗಿ ಮಂಡಿಸಿದೆ.
3) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
4) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯರವರ ಅವಗಾಹನೆಗಾಗಿ ಮಂಡಿಸಿದೆ.
5) ಆರೋಗ್ಯ ವೈಧ್ಯಾಧಿಕಾರಿಗಳು (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ವಲಯ ಅರಣ್ಯಾಧಿಕಾರಿಗಳು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು (ಟಿ.ದಾ.ಉ.ವಿ) ರವರ ಮಾಹಿತಿಗಾಗಿ ಕಳುಹಿಸಿದೆ
9) ಸಹಾಯಕ ಕಂದಾಯ ಅಧಿಕಾರಿ (ದಾ.ಉ.ವಿ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸಲ್ಲಿಸಿದೆ
11) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಕಳುಹಿಸಿದೆ.
12) ಹಿರಿಯ / ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 14 ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
13) ಕಲ್ಯಾಣಾಧಿಕಾರಿಗಳು (ದಾವ) ಬಿಬಿಎಂಪಿ ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
14) ಕಛೇರಿ ಪ್ರತಿ.